**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂ.ಶಿ.ನಿ 01 ಸಿಡಿಸಿ(1) 2013-14 365

ನಿರ್ದೇಶಕರ ಕಾರ್ಯಾಲಯ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 09-04-2013.
12

# ಸುತ್ತೋಲೆ

**ವಿಷಯ: ಅನಧಿಕೃತ ಟುಟೋರಿಯಲ್/ಕೋಚಿಂಗ್/ಅಂಚೆ ತೆರಪಿನ/ ದೂರ ಶಿಕ್ಷಣ ಮಾಧ್ಯಮ ವಿದ್ಯಾಲಯಗಳ ಸ್ಟಡಿ ಸೆಂಟರ್ ಇತ್ಯಾದಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಕರ್ನಾಟಕ ಶಿಕ್ಷಣ ಕಾಯಿದೆ 1983 ಪ್ರಕಾರ ಕ್ರಮ ಕೈಗೊಳ್ಳುವ ಬಗ್ಗೆ.**

ಉಲ್ಲೇಖ: ತಾಂತ್ರಿಕ ವಿದ್ಯಾರ್ಥಿಗಳ ಒಕ್ಕೂಟ, ನಂ.18 1ನೇ ಮುಖ್ಯ ರಸ್ತೆ, ಮಧುರನಗರ, ವಿಜಯನಗರ, ಬೆಂಗಳೂರು ಇವರ ಮನವಿ ಪತ್ರ ದಿನಾಂಕ: 03.04.2013.

-()-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಪ್ಲೋಮ/ಬಿ.ಇ/ಇತರೆ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಅನಧಿಕೃತ ಟುಟೋರಿಯಲ್ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವುದಾಗಿ ನಿರ್ದೇಶನಾಲಕ್ಕೆ ಅಧಿಕೃತವಾಗಿ ದೂರುಗಳು ಬಂದಿದ್ದು, ತತ್ಸಂಬಂದವಾಗಿ ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ " ದ ಕರ್ನಾಟಕ ಟುಟೋರಿಯಲ್ ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್ ಆಕ್ಟ್ 2001" ಪ್ರಕಾರ ಈ ಕೆಳಕಂಡ ನಿಯಮಗಳನ್ನು ಗಮನಿಸಬೇಕಾಗಿರುತ್ತದೆ.

1. ತಾಂತ್ರಿಕ ಶಿಕ್ಷಣದಲ್ಲಿ ಮನೆಪಾಠ/ ಕೋಚಿಂಗ್/ ಸಿಇಟಿ ಕೋಚಿಂಗ್ ಇತ್ಯಾದಿ ಟುಟೋರಿಯಲ್ ತರಗತಿಗಳನ್ನು ನಡೆಸಲು, ಸಂಸ್ಥೆಗಳು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ " ದ ಕರ್ನಾಟಕ ಟುಟೋರಿಯಲ್ ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್ ಆಕ್ಟ್ 2001" ಪ್ರಕಾರ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ನೋಂದಾಯಿಸುವುದು ಕಡ್ಡಾಯವಾಗಿತ್ತದೆ.

2. ಸದರಿ ಟುಟೋರಿಯಲ್ ಸಂಸ್ಥೆಗಳಲ್ಲಿ ಸರ್ಕಾರಿ/ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು / ಬೋಧಕರು / ಕಾರ್ಯಗಾರ ಸಿಬ್ಬಂದಿ / ಕಛೇರಿ ಸಿಬ್ಬಂದಿಯವರು ಟುಟೋರಿಯಲ್ ತರಗತಿಗಳನ್ನು ನಡೆಸುವುದು ಅಥವಾ ಪಾಠಪ್ರವಚನಗಳನ್ನು ಮಾಡುವುದು ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ " ದ ಕರ್ನಾಟಕ ಟುಟೋರಿಯಲ್ ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್ ಆಕ್ಟ್ 2001" ಪ್ರಕಾರ ಅಪರಾಧವಾಗಿದ್ದು, ಟುಟೋರಿಯಲ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವುದನ್ನು ನಿರ್ಬಂಧಿಸಿದೆ.

3. ಅನಧಿಕೃತವಾಗಿ ಮನೆಪಾಠ/ ಕೋಚಿಂಗ್/ ಸಿಇಟಿ ಕೋಚಿಂಗ್ ಇತ್ಯಾದಿ ಟುಟೋರಿಯಲ್ ತರಗತಿಗಳನ್ನು ನಡೆಸುವುದು ಅಥವಾ ಸಂಸ್ಥೆಗಳನ್ನು ಹೊಂದುವುದು ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಪ್ರಕಾರ ಅಪರಾಧವಾಗಿರುತ್ತದೆ.

4. ನೋಂದಾಯಿತ ಟ್ಯುಟೋರಿಯಲ್ ಸಂಸ್ಥೆಗಳು " ದ ಕರ್ನಾಟಕ ಟ್ಯುಟೋರಿಯಲ್ ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್ ಆಕ್ಟ್ 2001" ರಲ್ಲಿ ತಿಳಿಸಿದ ನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಿಸಬೇಕಾಗಿದ್ದು, ನಿಯಮಾಳಿಗಳ ಪ್ರಕಾರ ಪ್ರತಿವರ್ಷ ನಿರ್ದೇಶನಾಲಯಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸಿ ನೋಂದಣಿಯನ್ನು ನವೀಕರಿಸಬೇಕಾಗಿರುತ್ತದೆ.

5. ನೋಂದಾಯಿತ ಟ್ಯುಟೋರಿಯಲ್ ಸಂಸ್ಥೆಗಳು ಕಾಯಿದೆಯಲ್ಲಿ ತಿಳಿಸಿದ ನಿಯಮಗಳಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿದ ಕಟ್ಟಡ, ನಿಗಧಿತ ವಿಸ್ತೀರ್ಣವುಳ್ಳ ತರಗತಿ ಕೋಣೆಗಳು, ಸಕ್ಷಮ ಪ್ರಾಧಿಕಾರದಿಂದ ಪ್ರಮಾಣೀಕರಿಸಿದ ಶೌಚಾಲಯದ/ನೀರಿನ ವ್ಯವಸ್ಥೆಯನ್ನು ಹೊಂದಿರತಕ್ಕದ್ದು.

6. ಒಂದು ಟ್ಯುಟೋರಿಯಲ್ ತರಗತಿಯಲ್ಲಿ ಗರಿಷ್ಠ 30 ವಿದ್ಯಾರ್ಥಿಗಳಿಗೆ ಅನುಗಣವಾಗಿ ಪೀಠೋಪಕರಣಗಳ ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ. ಒಬ್ಬ ವಿದ್ಯಾರ್ಥಿಗೆ ಕನಿಷ್ಠ 5 ರಿಂದ 7 ಚದರ ಅಡಿ ವಿಸ್ತೀರ್ಣತೆಯ ತರಗತಿ ಜಾಗವನ್ನು ಒದಗಿಸಬೇಕಾಗಿರುತ್ತದೆ.

7. ಟ್ಯುಟೋರಿಯಲ್ ತರಗತಿಗಳನ್ನು ನಡೆಸಲು ಪರಿಣಿತ ಉಪನ್ಯಾಸಕರು/ಶಿಕ್ಷಕರನ್ನು ನೇಮಿಸಿ, ಅವರ ವಿದ್ಯಾರ್ಹತೆ, ಅನುಭವ, ಸಂಭಾವನೆ ಇತ್ಯಾದಿ ವಿವರಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಹಾಗೂ ವಿದ್ಯಾರ್ಥಿಗಳಿಂದ ಪಡೆದ ಟ್ಯುಟೋರಿಯಲ್ ಶುಲ್ಕದ (ಮೂಲ ರಶೀದಿಗಳ ಸಮೇತ) ವಿವರಗಳು, ಬಟವಾಡೆಗಳ ವಿವರಗಳು, ಇತರೆ ಖರ್ಚುವೆಚ್ಚಗಳ ವಿವರಗಳನ್ನೊಂಡ ವಾರ್ಷಿಕ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ.

8. ಮೇಲ್ಕಂಡ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಲ್ಲಿ, ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ " ದ ಕರ್ನಾಟಕ ಟ್ಯುಟೋರಿಯಲ್ ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್ ಆಕ್ಟ್ 2001" ಪ್ರಕಾರ ಸಂಸ್ಥೆಯ ಟ್ಯುಟೋರಿಯಲ್ ನೋಂದಣಿಯನ್ನು ರದ್ದುಪಡಿಸಲಾಗುವುದು ಹಾಗು ಟ್ಯುಟೋರಿಯಲ್ ಕಾರ್ಯವನ್ನು ಸ್ಥಗಿತಗೊಳಿಸಲಾಗುವುದು.

ಮೇಲ್ಕಂಡ ಎಲ್ಲಾ ನಿಯಮಾವಳಿಗಳನ್ನು ಪಾಲಿಸದ ಅನಧಿಕೃತ ಟ್ಯುಟೋರಿಯಲ್/ಕೋಚಿಂಗ್/ಅಂಚೆ ತೆರಪಿನ/ ದೂರ ಶಿಕ್ಷಣ ಮಾಧ್ಯಮ ವಿದ್ಯಾಲಯಗಳ ಸ್ಟಡಿ ಸೆಂಟರ್ ಇತ್ಯಾದಿ ಶಿಕ್ಷಣ ಸಂಸ್ಥೆಗಳು ಕಂಡುಬಂದಲ್ಲಿ ಕೂಡಲೇ ನಿರ್ದೇಶನಾಲಯಕ್ಕೆ ಮಾಹಿತಿ ನೀಡಲು ಸೂಚಿಸಿದೆ. ಸದರಿ ಸುತ್ತೋಲೆಯನ್ನು ತಮ್ಮ ಸಂಸ್ಥೆಯ ವಿದ್ಯಾರ್ಥಿಗಳು / ಉಪನ್ಯಾಸಕರು / ಬೋಧಕರು / ಕಾರ್ಯಗಾರ ಸಿಬ್ಬಂದಿ / ಕಛೇರಿ ಸಿಬ್ಬಂದಿಯವರ ಗಮನಕ್ಕೆ ತಂದು, ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

ನಿರ್ದೇಶಕರು
10/4/13

ಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರಿಗೆ.- ತಮ್ಮ ಸಂಸ್ಥೆಯ ಅಸುಪಾಸಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅನಧಿಕೃತ ಟ್ಯುಟೋರಿಯಲ್/ಕೋಚಿಂಗ್/ಅಂಚೆ ತೆರಪಿನ/ ದೂರ ಶಿಕ್ಷಣ ಮಾಧ್ಯಮ ವಿದ್ಯಾಲಯಗಳ ಸ್ಟಡಿ ಸೆಂಟರ್ ಇತ್ಯಾದಿ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನು ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಿ, ಸಂಬಂಧಪಟ್ಟವರಿಗೆ ಮಾಹಿತಿ ನೀಡಲು ಸೂಚಿಸಿದೆ.

S. E. Governance, D.TE, B'lore